**ನಂ. 1/1/2007 ಡಿಸಿಹೆಚ್/ಡಬ್ಲ್ಯುಡಬ್ಲ್ಯು/ಹೆಚ್‌ಡಬ್ಲ್ಯುಸಿಡಬ್ಲ್ಯುಎಸ್**

# "ಆರೋಗ್ಯ ವಿಮಾ ಯೋಜನೆ (ಹೆಚ್ಐಎಸ್)"ಯ ಅನುಷ್ಠಾನದ ಬಗ್ಗೆ ಮಾರ್ಗದರ್ಶನಗಳು–ಕೈಮಗ್ಗಗಳ ನೇಕಾರರುಗಳಿಗೆ ವ್ಯಾಪಕ ಕ್ಷೇಮಾಭಿವೃದ್ಧಿ ಯೋಜನೆಯ ಉಪಾಂಗ

## 1. ಪ್ರಸ್ತಾವನೆ :

ಭಾರತ ಸರ್ಕಾರವು ಕೈಮಗ್ಗ ನೇಕಾರರ ಅನುಕೂಲಕ್ಕಾಗಿ ಆರೋಗ್ಯ ಪ್ಯಾಕೇಜ್ ಯೋಜನೆಯಂತಹ ಒಂದು ಕ್ಷೇಮಾಭಿವೃದ್ಧಿ ಕಾರ್ಯಕ್ರಮವನ್ನು 1992–93ನೇ ಸಾಲಿನಿಂದ ಜಾರಿಗೊಳಿಸಿದೆ. ಭಾರತ ಸರ್ಕಾರವು ಆರೋಗ್ಯ ವಿಮಾ ಯೋಜನೆಯನ್ನು ಕೈಮಗ್ಗ ನೇಕಾರರಿಗಾಗಿ 2005–06ರಲ್ಲಿ ಐಸಿಐಸಿಐ "ಲೋಂಬಾರ್ಡ್ ಜನರಲ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್" ಮೂಲಕ ಪರಿಚಯಿಸಿತ್ತು. ಈ ಯೋಜನೆಯನ್ನು ಪರಿಷ್ಕೃತ ರೂಪದಲ್ಲಿ 2007–08 ಮತ್ತು 2008–09ರಲ್ಲಿ ಜಾರಿಗೊಳಿಸಲಾಗುವುದು. ಈ ಆರೋಗ್ಯ ವಿಮಾ ಯೋಜನೆಯ ಉದ್ದೇಶ ಮತ್ತು ಇತರ ಗಮನಾರ್ಹ ವೈಶಿಷ್ಟ್ಯಗಳನ್ನು ಈ ಕೆಳಕಂಡಂತೆ ನೀಡಿದೆ.

## 1. ಉದ್ದೇಶ :

ಆರೋಗ್ಯ ವಿಮಾ ಯೋಜನೆಯು ದೇಶದಲ್ಲಿ ನೇಕಾರರ ಸಮುದಾಯಕ್ಕೆ ಆರ್ಥಿಕವಾಗಿ ಸಬಲಗೊಳಿಸಿ ಅತ್ಯುತ್ತಮ ಆರೋಗ್ಯ ರಕ್ಷಣೆ ಸೌಲಭ್ಯಗಳನ್ನು ಒದಗಿಸುವ ಗುರಿ ಹೊಂದಿದೆ. ಈ ಯೋಜನೆಯು ನೇಕಾರರನ್ನು ಮಾತ್ರ ಅಲ್ಲದೇ ಆತನ ಹೆಂಡತಿ ಮತ್ತು ಇಬ್ಬರು ಮಕ್ಕಳಿಗೂ ಸಹ ಅನ್ವಯವಾಗುವುದೇ ಅಲ್ಲದೇ ಈ ಹಿಂದಿನ ಎಲ್ಲಾ ಖಾಯಿಲೆಗಳು ಮತ್ತು ಹೊಸ ಖಾಯಿಲೆಗಳ ಬಗೆಗಿನ ವೆಚ್ಚವನ್ನು ಒಳಗೊಂಡಿದ್ದು ಗಣನೀಯವಾಗಿ ಹೊರರೋಗಿಗಳಿಗೆ ಅವಕಾಶ ಒದಗಿಸುವುದು. ಅಧೀನ ಕೈಮಗ್ಗದ ಕೆಲಸಗಾರರು ಅಂದರೆ ನೇಯ್ಗೆಯ, ನೂಲುವ, ಬಣ್ಣ ಹಾಕುವ, ಮುದ್ರಿಸುವ, ಸಂಸ್ಕರಿಸುವ, ಗಂಜಿ ಹಾಕುವ, ಜಾಕ್ವಾರ್ಡ್ ಕತ್ತರಿಸುವವರ ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡುವರು.

## 2. ಯೋಜನೆಯ ಗಮನಾರ್ಹ ವೈಶಿಷ್ಟ್ಯಗಳು :

### 2.1 ವಂತಿಗೆಯ ಮಾದರಿ

| | | | |
|---|---|---|---|
| (1) | ಭಾರತ ಸರ್ಕಾರದಿಂದ ವಂತಿಗೆ | : | ರೂ. 642.47ಪೈ/ವಾರ್ಷಿಕ (ಪ್ರೀಮಿಯಂ ರೂ. (556.50ಪೈ) ಸೇವಾತೆರಿಗೆ ರೂ. 85.97ಪೈ. (12.3% 2007–08ರ ಸಾಲಿಗೆ) |
| (2) | ಕೈಮಗ್ಗದ ನೇಕಾರರಿಂದ/ ರಾಜ್ಯ ಸರ್ಕಾರದಿಂದ ವಂತಿಗೆ | : | ರೂ. 139.17ಪೈ/ವಾರ್ಷಿಕವಾಗಿ |

ಈ ಸಂಬಂಧವಾಗಿ ಪ್ರಕರಣಗಳಲ್ಲಿ ರಾಜ್ಯ ಸರ್ಕಾರಗಳು ವಂತಿಗೆಯನ್ನು ಪಾವತಿ ಮಾಡುತ್ತಿದ್ದರೂ ಸಹ, ಪ್ರತಿ ಕುಟುಂಬಕ್ಕೆ ನೇಕಾರರಿಂದ ಕನಿಷ್ಟ ವಂತಿಗೆಯು ರೂ. 50/– ಗಳಾಗಿರತಕ್ಕದ್ದು.

(3)ಒಟ್ಟಿನ ವಂತಿಗೆ : ರೂ. 781.60 ಪೈ/ವಾರ್ಷಿಕವಾಗಿ (ಸೇವಾತೆರಿಗೆಯೂ ಸೇರಿದಂತೆ)

**2.2 ನಿಧಿಯ ಬಿಡುಗಡೆ**

1.ಈ ಯೋಜನೆಯ ವ್ಯಾಪ್ತಿಯಲ್ಲಿ ನೇಕಾರರನ್ನು ಒಳಪಡಿಸುವುದಕ್ಕಾಗಿ ಕೇಂದ್ರ ಸರ್ಕಾರದ ಪಾಲಿನ ಪ್ರೀಮಿಯಂ ಮೊತ್ತವನ್ನು ಮತ್ತು ಸೇವಾತೆರಿಗೆಯನ್ನು ಒಟ್ಟಿನಲ್ಲಿ ಒಳಪಡುವ ನೇಕಾರರ ಸಂಖ್ಯೆಯನ್ನು ಪರಿಗಣಿಸಿ ಅದರ ಒಟ್ಟು ಶೇ. 30ರಷ್ಟು ಮೊತ್ತವನ್ನು ಬಿಡುಗಡೆಗೊಳಿಸಲಾಗುತ್ತದೆ. ಯಾವುದೇ ಹಂತದ ಮೇಲೆ ತಿಳಿಸಿದ ಮೊತ್ತದ ಶೇ. 66ರಷ್ಟು ಹಣವು ನೇಕಾರರನ್ನು ಸದಸ್ಯರನ್ನಾಗಿಸಲು ಉಪಯೋಗವಾದಲ್ಲಿ ಆಗ ಕಂಪನಿಯು ಪ್ರಗತಿಯ ಒಂದು ವರದಿಯನ್ನು ಅಭಿವೃದ್ಧಿ ಆಯುಕ್ತರು, ಕೈಮಗ್ಗಗಳು ಇವರ ಕಚೇರಿಗೆ ಸಲ್ಲಿಸಿ ಅದರಲ್ಲಿ ಸದಸ್ಯರಾಗಿ ಸೇರಿದವರ ಸಂಖ್ಯೆ ಮತ್ತು ಈ ಸಂಬಂಧ ಅದಕ್ಕಾಗಿ ಉಪಯೋಗಿಸಿದ ಹಣದ ವಿವರಗಳನ್ನು ನೀಡತಕ್ಕದ್ದು. ಪ್ರಗತಿ ವರದಿ ಸ್ವೀಕರಿಸಿದ ನಂತರ ಮುಂದೆ ರಾಜ್ಯ ಸರ್ಕಾರ ನಂತರ ಕೈಮಗ್ಗಗಳ ಅಭಿವೃದ್ಧಿ ಆಯುಕ್ತರವರ ಕಚೇರಿಯಿಂದ ಪ್ರೀಮಿಯಂನ ಮುಂದಿನ ಕಂತನ್ನು ಶೇ. 30ರಷ್ಟು ಮೊತ್ತದ ಬಿಡುಗಡೆಗೆ ಮುಂದಿನ ಕ್ರಮ ಕೈಗೊಳ್ಳುವಾಗ ಮುಂದುವರಿದಂತೆ ಇದೇ ಅನುಪಾತದಲ್ಲಿ ಹಣ ಬಿಡುಗಡೆಯನ್ನು ಶೇ. 90ರಷ್ಟು ಮೊತ್ತ ತಲುಪುವವರೆಗೆ ನೀಡಲಾಗುತ್ತದೆ. ಒಮ್ಮೆ ಯುಸಿಗಳ ಶೇ. 90ರಷ್ಟು ಮೊತ್ತ ಸ್ವೀಕರಿಸಿದ ನಂತರ ಮಾತ್ರ ಉಳಿದ ಶೇ. 10ರಷ್ಟನ್ನು ಬಿಡುಗಡೆಗೊಳಿಸಲಾಗುತ್ತದೆ.

2.ಸೇವಾ ತೆರಿಗೆಯು ವಾರ್ಷಿಕ ವಿಮಾ ಪ್ರೀಮಿಯಂಗೆ ಅನ್ವಯವಾಗುವಂತೆ ರೂ. 695.63 ಪೈ.ಗಳಾಗುತ್ತದೆ, ಅದನ್ನು ಭಾರತ ಸರ್ಕಾರವೇ ಭರಿಸುವುದು.

3.ಐಸಿಐಸಿಐ ಲೋಂಬಾರ್ಡ್, ಮುಂದಿನ ಪಾಲಿಸಿ ಅವಧಿಗೆ ಮುಂದುವರಿಯಲಿದ್ದು ಅದು ಹೆಚ್ಚುವರಿ ಮೊತ್ತವಾಗುವುದು, ಕ್ಲೈಂಗಳು ಐಬಿಎನ್‌ಆರ್ ಮತ್ತು ಟಿಪಿಎಗಳ ವೆಚ್ಚವೂ ಸೇರಿದಂತೆ ಅದು ಅನುಮೋದಿತ ವಾರ್ಷಿಕ ಪ್ರೀಮಿಯಂನ ಶೇ. 70ರಷ್ಟು ಆಗುತ್ತದೆ.

**ಜಾರಿಗೊಳಿಸುವ ಏಜೆನ್ಸಿಗಳು**

ಈ ಯೋಜನೆಯು ಡಿಸಿಹೆಚ್‌ಎಲ್‌ನ ಕಚೇರಿಯಿಂದ ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮೂಲಕ ಜಾರಿಗೊಳಿಸಲ್ಪಡುತ್ತದೆ. ಪ್ರಭಾರ ಹೊಂದಿರುವ ರಾಜ್ಯದ ನಿರ್ದೇಶಕರು, ಕೈಮಗ್ಗಗಳು / ಕೈಗಾರಿಕೆಗಳ ನಿರ್ದೇಶಕರು / ಅವರವರ ರಾಜ್ಯಗಳಲ್ಲಿ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ಜವಾಬ್ದಾರರಾಗಿರುತ್ತಾರೆ.

**4. ಅರ್ಹತೆ**

"ಕೈಮಗ್ಗ ನೇಕಾರರ ಆರೋಗ್ಯ ವಿಮಾ ಯೋಜನೆ"ಯಲ್ಲಿ ಸೌಲಭ್ಯವನ್ನು ಪಡೆಯುವುದಕ್ಕೆ (ಈ ಬಗ್ಗೆ "ನೇಕಾರರು" ಎಂಬ ಶಬ್ದವು ಅಧೀನ ಕೈಮಗ್ಗ ನೇಕಾರ ಕೆಲಸಗಾರರು ಸೇರಿದಂತೆ ಯಾರು ನೇಯ್ಗೆಯ, ಹೊಸೆಯುವ ಬಣ್ಣ ಹಾಕುವ, ಮುದ್ರಿಸುವ, ಸಂಸ್ಕರಿಸುವ, ವಿನ್ಯಾಸಬೋಳಿಸಲು, ಸ್ವಚ್ಛಗೊಳಿಸುವ ಜಾಕ್ವಾರ್ಡ್ ಕತ್ತರಿಸುವ ಇತ್ಯಾದಿ ಕೆಲಸ ನಿರ್ವಹಿಸುವವರುಗಳು ಒಳಪಡುವರು. ನೇಕಾರರುಗಳು ಕೆಳಕಂಡ ನಿಬಂಧನೆಗಳನ್ನು ಪೂರೈಸಬೇಕಾಗುತ್ತದೆ:

•ನೇಕಾರರು ಕೈಮಗ್ಗ ನೇಯ್ಗೆಯಿಂದಲೇ ತನ್ನ ಆದಾಯದ ಶೇ. 50ರಷ್ಟು ಕನಿಷ್ಟ ಆದಾಯವನ್ನು ಪಡೆಯುತ್ತಿರಬೇಕು.

•ಎಲ್ಲಾ ನೇಕಾರರು ಪುರುಷರಾಗಲಿ ಅಥವಾ ಮಹಿಳೆಯಾಗಲಿ ಅವರುಗಳು "ಆರೋಗ್ಯ ವಿಮಾ ಯೋಜನೆ"ಯ ಅಡಿಯಲ್ಲಿ ಪರಿಗಣಿಸಲು ಅರ್ಹರಾಗುವರು. ಈ ಯೋಜನೆಯ ಅಡಿಯಲ್ಲಿ 1 ದಿನದಿಂದ 80 ವರ್ಷದ ವಯಸ್ಸಿನ ನಡುವಿನ ಜನರಿಗೆ ಅವಕಾಶವಿರುತ್ತದೆ.

•ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ ಯೋಜನೆಯ ವ್ಯಾಪ್ತಿಗೆ ಮಹಿಳಾ ನೇಕಾರರು, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನೇಕಾರರು ಮತ್ತು ಈಶಾನ್ಯ ರಾಜ್ಯಗಳಿಗೆ ಸೇರಿದ ನೇಕಾರರು(ಅರುಣಾಚಲಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರ ಮತ್ತು ಸಿಕ್ಕಿಂ)ಗಳಿಗೆ ಸಾಕಷ್ಟು ಪ್ರಾತಿನಿಧ್ಯ ಲಭ್ಯವಾಗಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು ಆ ರಾಜ್ಯದ ಅಧಿಕಾರ ವಹಿಸಿಕೊಂಡಿರುವ ರಾಜ್ಯದ ನಿರ್ದೇಶಕರು ಮತ್ತು ಐಸಿಐನವರ ಹೊಣೆಗಾರಿಕೆಯಾಗಿರುತ್ತದೆ.

•ರಾಜ್ಯಕೈಮಗ್ಗ ಅಭಿವೃದ್ಧಿ ನಿಗಮಗಳು (ಅಪೆಕ್ಸ್) ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಸೇರಿರುವ ನೇಕಾರರುಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುವರು. ಸಹಕಾರಿಗಳಿಂದ ಹೊರಗಿರುವ ನೇಕಾರರನ್ನು ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಬಹುದಾಗಿದ್ದು ಇದಕ್ಕೆ ರಾಜ್ಯ ಕೈಮಗ್ಗಗಳ ನಿರ್ದೇಶನಾಲಯದಿಂದ ಅಂಥಹವರು ಅರ್ಹತಾ ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಒಂದು ಪ್ರಮಾಣಪತ್ರವನ್ನು ಪಡೆದುಕೊಳ್ಳುವುದು ಅಗತ್ಯ.

•ನೇಕಾರರುಗಳ ಮತ್ತು ಅಧೀನ ಕೈಮಗ್ಗದ ಕೆಲಸಗಾರರಗಳು ಈ ಯೋಜನೆಯ ಸೌಲಭ್ಯಗಳನ್ನು ಪಡೆದುಕೊಂಡಿರುವ ಬಗ್ಗೆ ಆ ರಾಜ್ಯದ ಅಧಿಕಾರ ವ್ಯಾಪ್ತಿ ಹೊಂದಿರುವ ನಿರ್ದೇಶಕರು, ಆ ನೇಕಾರರುಗಳ ಅರ್ಹತೆಯನ್ನು ಪರಿಶೀಲಿಸಬೇಕಾಗಿರುವ ಹೊಣೆಗಾರಿಕೆ ಹೊಂದಿರುವರು.

5. ವ್ಯಾಪ್ತಿ

ದೇಶದಲ್ಲಿನ ಯವುದೇ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂನಲ್ಲಿ ನೇಕಾರರು ವೈದ್ಯಕೀಯ ಚಿಕಿತ್ಸೆ ಪಡೆದು ಆ ಬಗ್ಗೆ ವೆಚ್ಚ ಭರಿಸಿದಲ್ಲಿ ಐಸಿಐಸಿಐ ಲೋಂಬಾರ್ಡ್‌ನಿಂದ ಆ ವೆಚ್ಚವನ್ನು ಪಾವತಿಸುವ/ವೆಚ್ಚ ತುಂಬಿಕೊಡುವುದು ಮಿತಿಗೆ/ಉಪ–ಮಿತಿಯ ಷರತ್ತಿಗೆ ಒಳಪಡುತ್ತದೆ.

6. ನಗದುರಹಿತ ಸೌಲಭ್ಯಗಳು :

ಐಸಿಐಸಿಐ ಲೋಂಬಾರ್ಡ್ ಅದರ ಅಧಿಕೃತ ಪ್ರತಿನಿಧಿಗಳ ಮೂಲಕ (ಮೂರನೇ ಪಾರ್ಟಿ ಆಡಳಿತಧಿಕಾರಿ) ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿರುವ ಮತ್ತು ಪಟ್ಟಿಯಲ್ಲಿ ಸೇರಿರುವ ಆಸ್ಪತ್ರೆಗಳು/ನರ್ಸಿಂಗ್‌ಹೋಂಗಳಲ್ಲಿ ಇವರಿಗೆ ನಗದುರಹಿತ ಸೌಲಭ್ಯವನ್ನು ಒದಗಿಸಬೇಕು. ಇದರ ಅರ್ಥ ಒಬ್ಬ ರೋಗಿಯು ಯಾವುದೇ ಒಂದು ಅಂತಹ ಪಟ್ಟಿಯಲ್ಲಿ ಸೇರಿರುವ ಆಸ್ಪತ್ರೆಗಳಲ್ಲಿ ವಾಸ್ತವವಾಗಿ ಯಾವುದೇ ಬಿಲ್ಲುಗಳನ್ನು ಪಾವತಿಸದೇ ಚಿಕಿತ್ಸೆ ಪಡೆಯಬಹುದು.

ಒಬ್ಬ ರೋಗಿಯು ಅನುಮೋದಿತ ಪಟ್ಟಿಯಲ್ಲಿ ಸೇರಿರದ ವೈದ್ಯರಲ್ಲಿಗೆ ಅಥವಾ ಒಂದು ಕ್ಲಿನಿಕ್‌ಗೆ ಹೋದ ಸಂದರ್ಭದಲ್ಲಿ ಆಗ ವೈದ್ಯರ ಸಲಹಾ ಚೀಟಿ ಮತ್ತು ಔಷಧಿಗಳನ್ನು ಖರೀದಿಸಿದ ಓಚರ್‌ಗಳನ್ನು ಐಸಿಐಸಿಐ ಲೋಂಬಾರ್ಡ್‌ಗೆ ಅಥವಾ ಅದರ ಅಧಿಕೃತ ಪ್ರತಿನಿಧಿಗೆ (ಟಿಪಿಎ) ಸಲ್ಲಿಸಬಹುದಾಗಿದ್ದು, ಅವರು ಪೂರ್ತಿಯಾಗಿ ಹಣ ಪಾವತಿಸಲು ಎಲ್ಲಾ ಅಗತ್ಯ ದಾಖಲೆಗಳ ಮತ್ತು ಮಾಹಿತಿ ಪಡೆದು ನಂತರ 15 ದಿನಗಳಲ್ಲಿ ಪಾವತಿಸಬೇಕು.

7. ಅವಧಿ

7.1. ಈ ಕಾರ್ಯನೀತಿಯ ವಿಮೆ ಮಾಡಿದ ವ್ಯಕ್ತಿಯಿಂದ ಪ್ರೀಮಿಯಂ ಪಡೆದ ದಿನಾಂಕದಿಂದ 12 ತಿಂಗಳ ಅವಧಿವರೆಗೆ ಚಾಲ್ತಿಯಲ್ಲಿರುತ್ತದೆ.

7.2. ಒಬ್ಬ ನೇಕಾರನ ಕುಟುಂಬವು ಸಾಮಾನ್ಯವಾಗಿ ಒಂದು ವರ್ಷದ ಅನುಕೂಲತೆಗಳನ್ನು ಪಡೆಯಲು ಆತನ/ಆಕೆಯ ಭಾಗದ ಪ್ರೀಮಿಯಂ ಪಾವತಿ ಮಾಡಿದ ತಕ್ಷಣ ಅರ್ಹರಾಗುವರು. ಅದನ್ನು ಒಂದು ವರ್ಷ ಹೆಚ್ಚಿನ ಅವಧಿಗೂ ಸಹ ಪ್ರೀಮಿಯಂನ್ನು ಆತನ/ಆಕೆಯ ಬಗ್ಗೆ ಪಾವತಿಸಿ ನವೀಕರಣಗೊಳಿಸಬಹುದು.

7.3. ನವೀಕರಣಗಳಿಗೆ ಪ್ರಾಧಾನ್ಯತೆ ನೀಡಬೇಕು. ಕನಿಷ್ಠ ಶೇ 80ರಷ್ಟು ಪ್ರಕರಣಗಳನ್ನು 2ನೇ ವರ್ಷದಲ್ಲಿ ನವೀಕರಣಗೊಳಿಸಬೇಕು. 2ನೇ ವರ್ಷದಲ್ಲಿ ಶೇ 80ರಷ್ಟು ನವೀಕರಣಗಳನ್ನು ಪಡೆಯುವಲ್ಲಿ ತಪ್ಪಿದರೆ ಕಂಪನಿಯನ್ನು ಹೊರಹಾಕಬಹುದು.

8. ಅನುಕೂಲಗಳು

| | ರೂ. ಗಳಲ್ಲಿ |
|---|---|
| ಪ್ರತಿ ಕುಟುಂಬಕ್ಕೆ ವಾರ್ಷಿಕ ಮಿತಿ | 15,000/- |
| ಪ್ರತಿ ಕುಟುಂಬದ ಉಪಮಿತಿ | |
| ಹಿಂದೆ ಇದ್ದ / ಹಾಲಿ ಇರುವ ಖಯಿಲೆಗಳು + ಹೊಸ ಖಾಯಿಲೆಗಳು | 15,000/- |
| ಹೆರಿಗೆ (ಪ್ರತಿ ಮಗುವಿಗೆ ಮೊದಲ ಎರಡು ಮಕ್ಕಳಿಗೆ) | 2,500/- |
| ದಂತ ಚಿಕಿತ್ಸೆಗೆ | 250/- |
| ಕಣ್ಣಿನ ಚಿಕಿತ್ಸೆಗೆ | 75/- |
| ಕನ್ನಡಕಕ್ಕೆ | 250/- |
| ಸಾಧಾರಣ ಆಸ್ಪತ್ರೆಗೆ ದಾಖಲಾತಿ | 4,000/- |
| ಆಯುರ್ವೇದ/ಯುನಾನಿ/ಹೋಮಿಯೋಪತಿ/ಸಿದ್ಧ | 4,000/- |
| ಆಸ್ಪತ್ರೆಗೆ ದಾಖಲಾದರೆ (ಚಿಕಿತ್ಸಾ ಪೂರ್ವ ಮತ್ತು ನಂತರದ ವೆಚ್ಚ) | 15,000/- |

| | |
|---|---|
| ಚಿಕ್ಕಮಕ್ಕಳು | 500/– |
| ಓಪಿಡಿ | 7,500/– |
| ಪ್ರತಿ ಅನಾರೋಗ್ಯಕ್ಕೆ ಮಿತಿ | 7,500/– |

ಕೈಬಿಡಬೇಕಾದವುಗಳು

ಸೌಂದರ್ಯವರ್ಧಕ ಶಸ್ತ್ರಚಿಕಿತ್ಸೆ ಅಥವಾ ವೈದ್ಯಕೀಯ ಉಪಚಾರ, ಹೆಚ್‌ಐವಿ, ಏಡ್ಸ್, ಬಂಜೆತನ, ಗುಹ್ಯರೋಗ, ಉದ್ದೇಶಪೂರ್ವಕ ಸ್ವಯಂಕೃತ ಗಾಯಗಳು, ಮಾದಕದ್ರವ್ಯ ಸೇವನೆ ಅಥವಾ ಮಧ್ಯಪಾನ, ಯುದ್ಧ, ಗಲಭೆ, ಮುಷ್ಕರ, ಭಯೋತ್ಪಾದನೆ ಕೃತ್ಯಗಳು ಮತ್ತು ಅಣುಶಕ್ತಿಯ ಗಂಡಾಂತರಗಳು.

9. ಕಾರ್ಯಾಚರಣೆಯ ವಿಧಾನಗಳು

9.1. ಕೈಮಗ್ಗಗಳ ಅಧಿಕಾರ ಹೊಂದಿದ ರಾಜ್ಯದ ನಿರ್ದೇಶಕರು ನೇಕಾರರುಗಳನ್ನು ವಿಮೆಯ ವ್ಯಾಪ್ತಿಗೆ ತರುವುದುದನ್ನು ಐಸಿಐಸಿಐ ಲೋಂಬಾರ್ಡ್‌ನೊಂದಿಗೆ ಚರ್ಚಿಸಿ ಅಂತಿಮಗೊಳಿಸಬೇಕು.

9.2. ಭಾರತ ಸರ್ಕಾರದಿಂದ ಕೈಮಗ್ಗ ನೇಕಾರರಿಗೆ "ಆರೋಗ್ಯ ವಿಮಾಯೋಜನೆ"ಯ ಬಗ್ಗೆ ಮಾರ್ಗದರ್ಶನ ನೀಡಿದ ದಿನಾಂಕದಿಂದ ಯೋಜನೆಯು ಜಾರಿಗೆ ಬರುತ್ತದೆ.

9.3. ಕೈಮಗ್ಗ ನೇಯ್ಗೆಯಲ್ಲಿಯ ಅಧಿಕಾರ ಹೊಂದಿದ ರಾಜ್ಯದ ನಿರ್ದೇಶಕರ ಕಚೇರಿ ಮತ್ತು ಅದರ ಈ ಕ್ಷೇತ್ರದಲ್ಲಿನ ಅಧೀನ ಕಚೇರಿಗಳು ಈ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ನೋಡಲ್ ಏಜೆನ್ಸಿಗಳಾಗಿರುತ್ತವೆ.

9.4. ಕೇಂದ್ರ ಸರ್ಕಾರದಿಂದ ಅದರ ಪ್ರೀಮಿಯಂನ ಷೇರು ಭಾಗವನ್ನು ಈ ಯೋಜನೆ ಅಡಿಯಲ್ಲಿ ನೇಕಾರರನ್ನು ಒಳಪಡಿಸುವ ಬಗ್ಗೆ ಐಸಿಐಸಿಐ ಲೋಂಬಾರ್ಡ್‌ಗೆ ನೇರವಾಗಿ ಕಂತುಗಳ ಮೂಲಕ ಬಿಡುಗಡೆಗೊಳಿಸಲಾಗುತ್ತದೆ. ಸರ್ಕಾರದ ವಂತಿಗೆಯ ಪ್ರೀಮಿಯಂ ಮೊತ್ತವನ್ನು ಅದಕ್ಕೆ ಸಮನಾದ ಮೊತ್ತದೊಂದಿಗೆ ಮತ್ತು ಸೇವಾ ತೆರಿಗೆಯನ್ನು ಪ್ರೀಮಿಯಂ ಶೇ 30ರಷ್ಟನ್ನು ಒಳಪಡುವ ನೇಕಾರರ ಒಟ್ಟು ಸಂಖ್ಯೆಯನ್ನು ಆಧರಿಸಿ ಕಂಪೆನಿಗೆ ಬಿಡುಗಡೆಗೊಳಿಸಲಾಗುವುದು. ಯಾವುದೇ ಸಂದರ್ಭದಲ್ಲಿ ಮೇಲೆ ತಿಳಿಸಿದ ಮೊತ್ತದ ಶೇ. 66ರಷ್ಟು ನೇಕಾರರನ್ನು ಪಟ್ಟಿಗೆ ಸೇರಿಸುವಲ್ಲಿ ಉಪಯೋಗಿಸಿದಾಗ ಕಂಪನಿಯು ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಛೇರಿಗೆ ಪ್ರಗತಿಯ ವರದಿ ನೀಡಿ, ಅದಕ್ಕಾಗಿ ಸೇರಿಸಲ್ಪಟ್ಟ ಜನರ ಸಂಖ್ಯೆ ಮತ್ತು ಅದರ ಬಗ್ಗೆ ಉಪಯೋಗಿಸಿದ ಮೊತ್ತವನ್ನು ನೀಡುತ್ತದೆ. ಈ ಪ್ರಗತಿಯ ವರದಿ ಬಂದ ನಂತರ ಮುಂದುವರಿದಂತೆ ರಾಜ್ಯ ಸರ್ಕಾರದಿಂದಲೂ ಸಮರ್ಥನಾ ಪ್ರಮಾಣ ಪತ್ರ ಪಡೆದು, ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಮುಂದಿನ ಕ್ರಮಕೈಗೊಂಡು ಪ್ರೀಮಿಯಂ ಮುಂದಿನ ಕಂತಾದ ಶೇ 30ರಷ್ಟು ಹಣವನ್ನು ಬಿಡುಗಡೆಗೊಳಿಸುತ್ತದೆ. ಮುಂದಕ್ಕೆ ಬಿಡುಗಡೆಗೊಳಿಸುವ ಮೊತ್ತವು ಇದೇ ಅನುಪಾತದಲ್ಲಿ ಶೇ 90ರಷ್ಟು ಮೊತ್ತ ತಲುಪುವವರೆಗೆ ಮುಂದುವರಿಯುತ್ತದೆ. ಒಮ್ಮೆ ಯುಸಿಗಳು ಸ್ವೀಕರಿಸಿದ ಮೊತ್ತ ಶೇ 90ರಷ್ಟು ತಲುಪಿದನಂತರ ಉಳಿದ ಶೇ 10ರಷ್ಟು ಹಣವನ್ನು ಬಿಡುಗಡೆಗೊಳಿಸಬೇಕು.

9.5 ಈ ಸೌಲಭ್ಯ ಪಡೆಯಬಯಸುವ ಒಬ್ಬ ಭಾವೀ ಸದಸ್ಯರು ಸೇರುವಿಕೆ ಬಗ್ಗೆ ಒಂದು ನಿಗದಿತ ನಮೂನೆಯನ್ನು ಭರ್ತಿಮಾಡಿ ಅದರೊಂದಿಗೆ ಆತನ/ಆಕೆಯಪಾಲಿನ ಪ್ರೀಮಿಯಂ ಮೊತ್ತ ಸಹಿತ ಕೈಮಗ್ಗದ ರಾಜ್ಯ ನಿರ್ದೇಶಕರಿಗೆ ಸಲ್ಲಿಸಬೇಕಾಗುತ್ತದೆ. ಆ ಅರ್ಜಿನಮೂನೆ/ಸೇರುವಿಕೆ ನಮೂನೆಗಳನ್ನು ಕೈಮಗ್ಗದ ರಾಜ್ಯ ನಿರ್ದೇಶನಾಲಯಕ್ಕೆ ಮತ್ತು/ಅಥವಾ ನೇಕಾರರಿಗೆ ಐಸಿಐಸಿಐ ಲೋಂಬಾರ್ಡ್‌ನಿಂದ ಒದಗಿಸಲ್ಪಡುತ್ತದೆ.

9.6 ಕೈಮಗ್ಗದ ರಾಜ್ಯ ನಿರ್ದೇಶನಾಲಯವು ಅರ್ಜಿಯನ್ನು ಪರಾಮರ್ಶಿಸಿಬೇಕು ಮತ್ತು ಅದು ಅರ್ಹವಾಗಿದ್ದಲ್ಲಿ ಅಂಗೀಕರಿಸಿ ಪ್ರೀಮಿಯಂ ಮೊತ್ತದೊಂದಿಗೆ ಅಂಥಹ ಫಲಾನುಭವಿಗಳ ಪಟ್ಟಿಯೊಂದಿಗೆ ಪ್ರೀಮಿಯಂ ಹಣವನ್ನು ಐಸಿಐಸಿಐ ಲೋಂಬಾರ್ಡ್‌ಗೆ ಕಳುಹಿಸಬೇಕು.

9.7. ಫಲನುಭವಿಗಳ ಪಟ್ಟಿಯೊಂದಿಗೆ ಸ್ವೀಕೃತಿಗೊಂಡ ಮೊತ್ತವು ಕೈಮಗ್ಗದ ರಾಜ್ಯ ನಿರ್ದೇಶನಾಲಯದಿಂದ ತಲುಪಿದ ನಂತರ ಐಸಿಐಸಿಐ ಲೋಂಬಾರ್ಡ್‌ನಿಂದ "ಹೆಲ್ತ್ ಕಾರ್ಡ್‌ಗಳು" ನೀಡಲ್ಪಟ್ಟು ಅದು ಫಲಾನುಭವಿಗಳ ಪಟ್ಟಿಯೊಂದಿಗೆ ವಿಮೆಮಡಿದ ಪ್ರತಿಯೊಬ್ಬ ಹೆಸರಿನೊಂದಿಗೆ ರಾಜ್ಯದದ ಕೈಮಗ್ಗ ನಿರ್ದೇಶನಾಲಯಕ್ಕೆ ರವಾನೆಯಾಗುತ್ತದೆ. ನಂತರದಲ್ಲಿ ರಾಜ್ಯದ ಕೈಮಗ್ಗ ನಿರ್ದೇಶನಾಲಯವು ಜಾರಿಗೊಳಿಸಿದ ಏಜೆನ್ಸಿಯೊಂದಿಗೆ ಸೇರಿ ಈ ಬಗ್ಗೆ ಪ್ರತಿಯೊಬ್ಬ ಫಲಾನುಭವಿಗೆ ತಿಳಿಸುವ ವ್ಯವಸ್ಥೆ ಮಾಡುತ್ತದೆ.

9.8. ಒಂದು ವೇಳೆ ಒಬ್ಬ ಕೈಮಗ್ಗ ನೇಕಾರನು ಅವನ ಉದ್ಯೋಗವನ್ನು ಈ ನಿಯಮ ಅವಧಿಯೊಳಗಡೆ ಒಂದು ಸಂಸ್ಥೆ ಅಥವಾ ನಿಗಮದಿಂದ ಬೇರೆ ಕಡೆಗೆ ಬದಲಾಯಿಸಿಕೊಂಡಲ್ಲಿ ಈ ಯೋಜನೆಯಲ್ಲಿನ ಒಬ್ಬ ಫಲಾನುಭವಿಯಾಗಿ ಬಗ್ಗೆ ಮಾಹಿತಿಯನ್ನು ರಾಜ್ಯಸರ್ಕಾರಕ್ಕೆ ನೀಡತಕ್ಕದ್ದು.

9.9. ರಾಜ್ಯ ಸರ್ಕಾರಗಳು ಮತ್ತು ರಾಜ್ಯ ಕೈಮಗ್ಗ ನಿರ್ದೇಶನಾಲಯಗಳು/ಅಪೆಕ್ಸ್/ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು/ಯೂನಿಯನ್‌ಗಳು/ಸಂಘಟಣೆಗಳು ಸಕ್ರಿಯವಾಗಿ ಸೇರಿಕೊಂಡು ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ ಕೈಮಗ್ಗ ನೇಕಾರರುಗಳ ಮನ ಒಲಿಸುವ ಮೂಲಕ ಯೋಜನೆಗೆ ಅವರು ಸೇರುವಂತೆ ಪ್ರೋತ್ಸಾಹಿಸಬೇಕು.

9.10. ಐಸಿಐಸಿಐ ಲೋಂಬಾರ್ಡ್‌ನಿಂದ ಒಟ್ಟು ಸಂಖ್ಯೆಯ ಸದಸ್ಯರ ಸೇರ್ಪಡೆ ಬಗ್ಗೆ ಮಾಸಿಕ ವರದಿಯ ಕೈಮಗ್ಗದ ರಾಜ್ಯದ ನಿರ್ದೇಶಕರು/ಆಯುಕ್ತರಿಗೆ ಪರಿಶೀಲನೆಗಾಗಿ ಸಲ್ಲಿಸಬೇಕು, ಅದನ್ನು ಪ್ರಮಾಣೀಕರಿಸಿದ ನಂತರ ಸೂಕ್ತ ಪರಿಶೀಲನೆ ನಂತರ ಹೆಲ್ತ್‌ಕಾರ್ಡ್‌ಗಳನ್ನು ನೀಡಬೇಕು.

9.11. ಕೈಮಗ್ಗದ ರಾಜ್ಯನಿರ್ದೇಶನಾಲಯವು ನಿಯಕಾಲಿಕ ವರದಿಗಳನ್ನು ಪ್ರತಿ ತಿಂಗಳು 10ನೇ ದಿನಾಂಕದಂದು ಯೋಜನೆಗೆ ಒಳಗೊಂಡವರ ವಿವರ ಮತ್ತು ಕ್ಲೈಮುಗಳ ಇತ್ಯರ್ಥದ ವಿವರಗಳನ್ನು ಕೈಮಗ್ಗದ ಅಭಿವೃದ್ಧಿ ಆಯುಕ್ತರು ಜವಳಿ ಸಚಿವಾಲಯ ಇವರಿಗೆ ಸಲ್ಲಿಸಬೇಕು.

10. ಕ್ಲೇಮುಗಳ ವಿಧಿವಿಧಾನಗಳು

1) ಯೋಜಿತ ಆಸ್ಪತ್ರೆಗೆ ಸೇರುವಿಕೆ :

(ಎ) ಒಬ್ಬರೋಗಿಯು ಆತನ/ಆಕೆಯ ಅಪೇಕ್ಷೆಯಂತೆ ಪಟ್ಟಿಯಲ್ಲಿ ಸೇರಿರುವ ಯಾವುದೇ ಒಂದು ಆಸ್ಪತ್ರೆ/ನರ್ಸಿಂಗ್‌ಹೋಂಗೆ ಹೋಗಬಹುದು. ಅಂಥಹಪಟ್ಟಿಯಲ್ಲಿ ಸೇರಿರುವ ಆಸ್ಪತ್ರೆಗಳ ವಿವರಗಳನ್ನು ಐಸಿಐಸಿಐ ಲೋಂಬಾರ್ಡ್ ಒದಗಿಸುತ್ತದೆ. ಅದರ ಒಂದು ಪ್ರತಿಯನ್ನು ವೆಬ್‌ಸೈಟ್‌ನ www.handlooms.nic.in ನಲ್ಲಿ ಅಳವಡಿಸಲಾಗುತ್ತದೆ.

(ಬಿ) ಇದಕ್ಕೆ ಸಂಬಂಧಿಸಿದ ಪಟ್ಟಿಯಲ್ಲಿನ ಆಸ್ಪತ್ರೆಗಳು/ನರ್ಸಿಂಗ್‌ಹೋಂಗಳು ಆ ಬಗ್ಗೆ ರೋಗಿಯ ಹೆಸರು/ಪಾಲಿಸಿ ನಂ./ಅನಾರೋಗ್ಯ ಸ್ವಭಾವ/ಆಸ್ಪತ್ರೆಯ ಹೆಸರು/ಇವುಗಳನ್ನು ಐಸಿಐಸಿಐ ಲೋಂಬಾರ್ಡ್ ಅಥವಾ ಪ್ರತಿನಿಧಿಗಳ (ಟಿಪಿಎ)/ಸಂಪರ್ಕದ ವ್ಯಕ್ತಿಗಳ ಪಟ್ಟಿಯನ್ನು ಐಸಿಐಸಿಐ ಲೋಂಬಾರ್ಡ್ ಒದಗಿಸಬೇಕು.

(ಸಿ) ನೇಕಾರರ ಐಡಿ ಕಾರ್ಡ್‌ಗಳು ಐಸಿಐಸಿಐ ಲೋಂಬಾರ್ಡ್‌ನಿಂದ ನೀಡಲ್ಪಟ್ಟಿರುತ್ತವೆ, ಇದರಿಂದಾಗಿ ವಿಮೆಮಾಡಿದ ವ್ಯಕ್ತಿಯು ನಗದುರಹಿತ ಸೌಲಭ್ಯಗಳನ್ನು ಪಡೆಯಬಹುದು. ಐಸಿಐಸಿಐ ಲೋಂಬಾರ್ಡ್‌ನ ಅಥವಾ ಅದರ ಪ್ರತಿನಿಧಿಗಳ ವಿವರಗಳು ಮತ್ತು ದೂರವಾಣಿ ಸಂಖ್ಯೆಗಳು ಹೆಲ್ಪ್‌ಲೈನ್ ಸಂಖ್ಯೆಗಳನ್ನು ಸಹ ಐಡಿಕಾರ್ಡ್‌ನಲ್ಲಿ ನಮೂದಿಸಬೇಕು. ಇದರಿಂದ ಸುಲಭವಾಗಿ ದಾಖಲೆ ಲಭ್ಯತೆ, ಹೆಚ್ಚುವರಿಯಾಗಿ ಪಟ್ಟಿಯಲ್ಲಿ ಸೇರಿರುವ ಆಸ್ಪತ್ರೆಗಳು ಅನುಮತಿ ಪತ್ರದ ನಮೂನೆಯೊಂದನ್ನು ಫ್ಯಾಕ್ಸ್ ಮೂಲಕ ಐಸಿಐಸಿಐ ಲೋಂಬಾರ್ಡ್ ಅಥವಾ ಅದರ ಪ್ರತಿನಿಧಿಗಳಿಗೆ ರವಾನಿಸಬೇಕು. ಇದರಿಂದಾಗಿ ಅವರು 12ಗಂಟೆಯೊಳಗೆ ಅದಕ್ಕೆ ಅನುಮತಿ ನೀಡಲು ಸಹಾಯಕವಾಗುತ್ತದೆ.

(ಡಿ) ಚಿಕತ್ಸೆ ಪಡೆದನಂತರದಲ್ಲಿ ರೋಗಿಯು ಬಿಲ್ಲಿಗೆ ತನ್ನ ಸಹಿಮಾಡಿ ಬಿಡುಗಡೆಗೊಳ್ಳಬಹುದು. ಈ ಬಗ್ಗೆ ಯಾವುದೇ ಪಾವತಿ ಮಾಡುವಂತಿಲ್ಲ.

ii) ತುರ್ತುಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗುವುದು :

(ಎ) ಒಬ್ಬ ರೋಗಿಯು ಪಟ್ಟಿಯಲ್ಲಿರುವ ಯಾವುದೇ ಆಸ್ಪತ್ರೆಗೆ ತಕ್ಷಣವೇ ದಾಖಲಾಗಬಹುದು.

(ಬಿ) ಆಸ್ಪತ್ರೆಗೆ ತನ್ನ ಐಡಿ ಕಾರ್ಡ್‌ನ್ನು ಹಾಜರುಪಡಿಸಬೇಕು ಮತ್ತು ರೋಗಿಯು ಚಿಕಿತ್ಸೆ ಪಡೆಯಬಹುದು. ಅದೇ ಸಮಯಕ್ಕೆ ಕುಟುಂಬವರ್ಗದವರು ಐಸಿಐಸಿಐ ಲೋಂಬಾರ್ಡ್ ಅಥವಾ ಅದರ ಪ್ರತಿನಿಧಿಗಳನ್ನು (ಟಿಪಿಎ) ಹೆಲ್ಪ್‌ಲೈನ್ ಮೂಲಕ ಸಂಪರ್ಕಿಸಬಹುದು ಮತ್ತು ಅವರಿಗೆ ಮೊದಲಿನ ಅನುಮತಿ ನಮೂನೆಯನ್ನು ಸಲ್ಲಿಸಬೇಕು. ಆಗ ಐಸಿಐಸಿಐ ಲೋಂಬಾರ್ಡ್ ಅಥವಾ ಅದರ ಆಧಿಕೃತ ಪ್ರತಿನಿಧಿಗಳು (ಟಿಪಿಎ) ಆಸ್ಪತ್ರೆಗೆ ತಕ್ಷಣದಲ್ಲಿಯೇ ಅನುಮೋದನೆಯನ್ನು ಫ್ಯಾಕ್ಸ್ ಮೂಲಕ ನೀಡಬೇಕು.

(ಸಿ) ಚಿಕಿತ್ಸೆ ಪಡೆದನಂತರದಲ್ಲಿ ರೋಗಿಯು ಬಿಲ್ಲಿಗೆ ತನ್ನ ಸಹಿ ಮಾಡಿದ ನಂತರ ಬಿಡುಗಡೆಹೊಂದಬೇಕು. ಈ ಬಗ್ಗೆ ಯಾವುದೇ ಪಾವತಿ ಮಾಡುವಂತಿಲ್ಲ.

ಮರುಪಾವತಿ ಕ್ಲೇಮುಗಳು

iii) ನೆಟ್‌ವರ್ಕ್/ಪಟ್ಟಿಯಲ್ಲಿರುವ ಆಸ್ಪತ್ರೆಗಳಿಗೆ ಹೆಚ್ಚುವರಿಯಾಗಿ ರೋಗಿಯು ಒಬ್ಬ ವೈದ್ಯ ಅಥವಾ ಒಂದು ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ನೇಕಾರನು ಆ ಆಸ್ಪತ್ರೆಯ ಎಲ್ಲಾ ವೆಚ್ಚಗಳ ಬಿಲ್ಲನ್ನು ನೇರವಾಗಿ ಪಾವತಿಸಬಹುದು. ವೈದ್ಯಕೀಯ ಚಿಕಿತ್ಸೆಯನ್ನು ಪಟ್ಟಿಯಲ್ಲಿ ಸೇರದೇ ಇರುವ ಆಸ್ಪತ್ರೆಯಲ್ಲಿ, ನಮ್ಮ ದೇಶದ ಒಳಗಡೆ ಬರುವ ಯಾವುದೇ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂನಲ್ಲಿ ಪಡೆದುಕೊಂಡಿದ್ದಲ್ಲಿ ಆಗ ವಿಮಾ ಕಂಪನಿಯು ನೇಕಾರರು ಭರಿಸಿದ ವೆಚ್ಚವನ್ನು ಪಾವತಿಸಬೇಕು/ವೆಚ್ಚವನ್ನು ಅವರಿಗೆ ಮರುಪಾವತಿಸಬೇಕು, ಅದು ನಿಯಮದಲ್ಲಿ ನಮೂದಿತ ಮಿತಿಯೊಳಗೆ/ಪರಿಮಿತಿಯೊಳಗಿನ ಷರತ್ತಿಗೆ ಒಳಪಟ್ಟಿರಬೇಕು ಮತ್ತು ಸಿಜಿಹೆಚ್‌ಎಸ್‌ನಿಂದ ಅನುಮೋದಿತ ದರಗಳಿಗಿಂತ ಹೆಚ್ಚಾಗಿ ಇರಬಾರದು. ನೇಕಾರರು ಈ ಬಗ್ಗೆ ಪಡೆದ ಸಲಹಾಚೀಟಿ ಮತ್ತು ಔಷಧಿಗಳನ್ನು ಕೊಂಡುಕೊಂಡು ಓಚರ್‌ಗಳನ್ನು ವಿಮಾ ಕಂಪನಿಗೆ ಅಥವಾ ಟಿಪಿಎಗೆ ಸಲ್ಲಿಸಬೇಕು. ಅವರು ಎಲ್ಲಾ ದಾಖಲೆ ಮತ್ತು ಮಾಹಿತಿಗಳ ಸಂಗ್ರಹಿಸಿದ ನಂತರ 15 ದಿನಗಳ ಒಳಗಡೆ ಪೂರ್ತಿ ಪಾವತಿಯ ಬಗ್ಗೆ ಖಚಿತಪಡಿಸುವರು.

ಎತ) ನೆರವು

1.ಹೆಚ್ಚುವರಿಯಾಗಿ ಯಾವುದೇ ನೆರವಿಗೆ ರಾಜ್ಯದಲ್ಲಿನ ಐಸಿಐಸಿಐ ಲೋಂಬಾರ್ಡ್‌ನ ಸಮನ್ವಯಾಧಿಕಾರಿಗಳು ದೇಶದಾದ್ಯಂತ ಸಂಪರ್ಕಿಸಬಹುದು. ಅಂಥಹ ಅಧಿಕಾರಿಗಳ/ಸಂಪರ್ಕವ್ಯಕ್ತಿಗಳ ಒಂದು ಪಟ್ಟಿಯನ್ನು ಐಸಿಐಸಿಐ ಲೋಂಬಾರ್ಡ್ ಪ್ರಾದೇಶಿಕ ಭಾಷೆಯಲ್ಲಿ ನೀಡುತ್ತದೆ. ಈ ಪಟ್ಟಿಯ ಪ್ರತಿಯನ್ನು ವೆಬ್‌ಸೈಟ್ www.handlooms.nic.in ನಲ್ಲಿ ಲಭ್ಯವಿರುತ್ತದೆ ಮತ್ತು ದಿನಪತ್ರಿಕೆಗಳಲ್ಲೂ ಸಹ ಲಭ್ಯ.

2.ಮುದ್ರಿತ ಪಟ್ಟಿಗಳ ನೀಡಿಕೆ ಜೊತೆಗೆ ಐಸಿಐಸಿಐ ಲೋಂಬಾರ್ಡ್‌ನಿಂದ ಆಸ್ಪತ್ರೆಗಳ/ನರ್ಸಿಂಗ್‌ಹೋಂಗಳ ಸಂಪೂರ್ಣ ವಿವರಗಳನ್ನು ಸಹ ನೀಡಲ್ಪಡುತ್ತವೆ. ಅದನ್ನು ಟಿಪಿಎಗಳು ಮತ್ತು ಐಸಿಐಸಿಐ ಲೋಂಬಾರ್ಡ್‌ನ ಎಲ್ಲ ಸಂಬಂಧಿಸಿದ ಸರ್ಕಾರದ ಸಂಸ್ಥೆಗಳಿಗೆ ನೀಡುವುದು. ಈ ಪಟ್ಟಿಯ ಒಂದು ಪ್ರತಿಯು ವೆಬ್‌ಸೈಟ್ ತಿತಿತಿ.ಛಿಚಿಟಜಟಂಂಥ.ಟುಛಿ.ಟ ಮೇಲೆ ಲಭ್ಯವಿರುತ್ತದೆ.

11. ಐಸಿಐಸಿಐನ ಲೋಂಬಾರ್ಡ್‌ನ ಪಾತ್ರ

(1) ಐಸಿಐಸಿಐನ ಲೋಂಬಾರ್ಡ್ ಅಥವಾ ಅದರ ಅಧಿಕೃತ ಪ್ರತಿನಿಧಿಗಳು (ಟಿಪಿಎ) ಕೈಮಗ್ಗ ನೇಕಾರರ ವೈದ್ಯಕೀಯ ಚಿಕಿತ್ಸೆಗಾಗಿ ಇರುವ ಮಧ್ಯಮವರ್ಗಧ ಆಸ್ಪತ್ರೆಗಳು/ನರ್ಸಿಂಗ್‌ಹೋಂಗಳ ಒಂದು ಪಟ್ಟಿಯನ್ನು ರಾಜ್ಯ ಸರ್ಕಾರಗಳಿಗೆ ಮತ್ತು ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಗೆ ಕಳುಹಿಸಿಕೊಡುತ್ತಾರೆ. ಈ ಪಟ್ಟಿಯು ಪ್ರತಿ ತ್ರೈಮಾಸಿಕದ ನಂತರ ಅಂದಿನ ದಿನಾಂಕಕ್ಕೆ ಸಿದ್ಧವಾಗಿರಬೇಕು.

(2) ಐಸಿಐಸಿಐನ ಲೋಂಬಾರ್ಡ್ ಅಥವಾ ಅದರ ಅಧಿಕೃತ ಪ್ರತಿನಿಧಿಗಳು (ಟಿಪಿಎ) ಆರೋಗ್ಯ ವಿಮೆಯೋಜನೆ ಅಡಿಯಲ್ಲಿ ಬರುವ ಆಸ್ಪತ್ರೆಗಳ ಒಂದು ಪಟ್ಟಿಯನ್ನು ಸಹ ರಾಜ್ಯ ಸರ್ಕಾರಗಳಿಗೆ ಕಳುಹಿಸಿಕೊಡುತ್ತವೆ. ದೇಶದಲ್ಲಿ ಕಡೇ ಪಕ್ಷ 250 ಕೈಮಗ್ಗ ಗುಂಪುಗಳಿದ್ದು ಓಪಿಡಿ/ಐಪಿಡಿಗಳಿಗಗಿ ನಗದು ರಹಿತ ಸೌಲಭ್ಯಗಳನ್ನು ಪಡೆಯಬಹುದು. ರಾಜ್ಯ ಸರ್ಕಾರಗಳ ಸಲಹೆ ಮೇರೆಗೆ, ಆಸ್ಪತ್ರಗಳ ಸೌಕರ್ಯ ಹೆಚ್ಚಿಸುವ / ಕೈಬಿಡುವ ಪ್ರಸ್ತಾವನೆಯನ್ನು ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಗೆ ತಿಳಿಸುವ ಮೂಲಕ ಕೈಗೊಳ್ಳಬಹುದು.

(3) ಐಸಿಐಸಿಐನ ಲೋಂಬಾರ್ಡ್ ಈ ಯೋಜನೆ ಯಶಸ್ವಿಗೊಳಿಸುವ ಬಗ್ಗೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳಬೇಕು. ಐಸಿಐಸಿಐನ ಲೋಂಬಾರ್ಡ್ ಈ ಯೋಜನೆ ಆಡಿಯಲ್ಲಿ ನೇಕಾರರನ್ನು ಒಳಪಡಿಸುವ ಬಗ್ಗೆ ಕೈಮಗ್ಗ ರಾಜ್ಯ ನಿರ್ದೇಶಕರೊಂದಿಗೆ ಸಂಪರ್ಕವಿರಿಸಿಕೊಂಡು ಫಲಾನುಭವಿಗಳನ್ನು ಗುರುತಿಸಲು ಕ್ರಮ ಕೈಗೊಳ್ಳುವುದು, ನಮೂನೆಗಳನ್ನು ಕಳುಹಿಸುವುದು, ಸೂಚನೆಗಳನ್ನು ನೀಡುವಿಕೆ ಇತ್ಯಾದಿಗಳನ್ನು ನಿರ್ವಹಿಸಬೇಕು.

(4) ಐಸಿಐಸಿಐನ ಲೋಂಬಾರ್ಡ್ ಅಥವಾ ಅದರ ಅಧಿಕೃತ ಪ್ರತಿನಿಧಿಗಳು (ಟಿಪಿಎ) ಈ ಯೋಜನೆಯನ್ನು ಪ್ರಸಿದ್ಧಿಪಡಿಸಲು ಎಲ್ಲಾ ಕ್ರಮ ಕೈಗೊಳ್ಳುವರು ಇದನ್ನು ಕೈಮಗ್ಗ ನೇಕಾರರಲ್ಲಿ ಪ್ರಚಾರ ನೀಡುವ ಬಗ್ಗೆ ದೇಶದಾದ್ಯಂತ ವಿವಿಧ ರೀತಿಯಲ್ಲಿ ಅಂದರೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಕಟಣೆಗೊಳಿಸಿ ಪ್ರಚಾರಗೊಳಿಸಬೇಕು.

(5) ಐಸಿಐಸಿಐನ ಲೋಂಬಾರ್ಡ್ ಈ ಮಾಹಿತಿಯನ್ನು , ಸಂಬಂಧಿಸಿದ ಯೋಜನೆ/ಫಲಾನುಭವಿಗಳ ವಿವರಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಣೆಗೊಳಿಸುತ್ತದೆ. ಈ ಬಗ್ಗೆ ಕೈಗೊಂಡ ಕ್ರಮದ ಮಾಹಿತಿಯನ್ನು ಡಿಸಿ(ಹೆಚ್‌ಎಲ್)ರವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ತಿಳಿಸಬೇಕು.

(6) ಕೈಮಗ್ಗ ನೇಕಾರರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಶೀರ್ಘ ಇತ್ಯರ್ಥದ ಬಗ್ಗೆ ಓಪಿಡಿ ಒಳಗೊಂಡಂತೆ ಐಸಿಐಸಿಐ ಲೋಂಬಾರ್ಡ್ ಅಥವಾ ಪ್ರತಿನಿಧಿಗಳು ಪ್ರಮುಖ ಕೈಮಗ್ಗ ಗುಂಪುಗಳಿಗೆ 470 ಕೈಮಗ್ಗದ ಗುಂಪುಗಳ ಪೈಕಿ ಕಡೇ ಪಕ್ಷ 250 ಕೈಮಗ್ಗ ಗುಂಪುಗಳಿಗೆ ಕಚೇರಿಗಳನ್ನು ಆರಂಭಿಸುತ್ತಿದೆ. ಇದನ್ನು ಆದೇಶ ಪಡೆದ ಮೇಲೆ ಒಂದು ತಿಂಗಳ ಒಳಗಡೆ ಆರಂಭಿಸಬೇಕು.

(7) ಐಸಿಐಸಿಐ ಲೋಂಬಾರ್ಡ್ ಮಾಸಿಕ ಪ್ರಗತಿಯ ವರದಿಯನ್ನು ಪ್ರತಿ ತಿಂಗಳ 20ನೇ ದಿನಾಂಕದಂದು ಕೈಮಗ್ಗಗಳ ಅಭಿವೃದ್ಧಿ ಆಯುಕ್ತರ ಕಛೇರಿಗೆ ಕಳುಹಿಸುತ್ತಾರೆ. ಅದರಲ್ಲಿ ಪ್ರತಿ ತಿಂಗಳು ವಿಮೆಮಾಡಿದವರ ಸಂಖ್ಯೆ ಸಂಗ್ರಹವಾದ ಮತ್ತು ಬಳಕೆಯಾದ ಮೊತ್ತ ಮತ್ತು ಇತ್ಯರ್ಥಗೊಂಡ ಕ್ಲೈಮ್‌ಗಳ ವಿವರಗಳನ್ನು ನಮೂದಿಸಿರಬೇಕು.

(8) ಐಸಿಐಸಿಐನ ಲೋಂಬಾರ್ಡ್ ಪ್ರತಿ ತಿಂಗಳ 18ನೇ ದಿನಾಂಕದಂದು ರಾಜ್ಯದ ನಿರ್ದೇಶಕರು/ಕೈಮಗ್ಗ ವ್ಯಾಪ್ತಿಯ ಆಯುಕ್ತರೊಂದಿಗೆ ಸಭೆ ನಡೆಸಿ ಆರೋಗ್ಯ ವಿಮೆ ಯೋಜನೆಯ ಜಾರಿ ಬಗ್ಗೆ ಪರಿಶೀಲನೆ ನಡೆಸುತ್ತದೆ. ಒಂದು ವೇಳೆ ಅಂದು ರಜಾ ದಿನವಾದಲ್ಲಿ ಸಭೆಯು ಮುಂದಿನ ಕೆಲಸದ ದಿನದಂದು ನಡೆಯುತ್ತದೆ. ವಿಮಾ ಕಂಪನಿಯು ಆ ರಾಜ್ಯಗಳ ಸಂಬಂಧಪಟ್ಟ ಆಂಕಿ ಸಂಖ್ಯೆಗಳನ್ನು ಮುಂಚಿತವಾಗಿ ಕ್ಲೈಮ್‌ಗಳ ಇತ್ಯರ್ಥಪಡಿಸುವ ಅವರ ಇಲಾಖೆಯಿಂದ ಪಡೆದು ಒದಗಿಸುತ್ತದೆ. ಐಸಿಐಸಿಐಯು ಈ ಬಗ್ಗೆ ಅಗತ್ಯ ಮುಂದಿನ ಕ್ರಮಕೈಗೊಂಡು ವಿಷಯಗಳನ್ನು ಇತ್ಯರ್ಥಗೊಳಿಸುವಲ್ಲಿ ವಿಶೇಷವಾಗಿ ಪಾವತಿಗಳು ಮತ್ತು ಮರುಪಾವತಿಗಳ ಬಗ್ಗೆ ನಿಗಾವಹಿಸಬೇಕು.

12. ಉಸ್ತುವಾರಿ ಮತ್ತು ಮೌಲ್ಯಾಂಕನ

12.1 ಜಿಲ್ಲಾ ಮಟ್ಟದಲ್ಲಿ ರಾಜ್ಯ ಸರ್ಕಾರದ ಕೈಮಗ್ಗ ಸಹಾಯಕ ನಿರ್ದೇಶಕ ಮತ್ತು ಐಸಿಐಸಿಐ ಲೋಂಬಾರ್ಡ್ ಪ್ರತಿನಿಧಿಗಳ ಸಮಿತಿಯು ಪ್ರತಿ ತಿಂಗಳ ಮೊದಲ ವಾರದಲ್ಲಿ ಸಭೆ ಸೇರಿ ಅರ್ಜಿದಾರರನ್ನು ಪಟ್ಟಿಯಲ್ಲಿ ಸೇರಿಸಿರುವ ಪ್ರಗತಿ ಬಗ್ಗೆ ಮತ್ತು ಯೋಜನೆ ಅಡಿಯಲ್ಲಿ ಆ ಜಿಲ್ಲೆಯಲ್ಲಿ ಬರುವ ಕ್ಲೈಮ್‌ಗಳನ್ನು ಪಾವತಿಸಿದ ಬಗ್ಗೆ ಮತ್ತು ವಿಶೇಷವಾಗಿ ಕ್ಲೈಮ್‌ಗಳ ವಿಷಯಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು.

12.2 ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಛೇರಿಯು ತನ್ನ ವಿವಿಧ ಕ್ಷೇತ್ರ ಕಚೇರಿಗಳ ಮೂಲಕ ಪ್ರಗತಿಯ ಉಸ್ತುವಾರಿ ಮತ್ತು ರಾಜ್ಯ ಸರ್ಕಾರಗಳೊಂದಿಗೆ ಮತ್ತು ಐಸಿಐಸಿಐ ಲೋಂಬಾರ್ಡ್‌ಗಳೊಂದಿಗೆ ಕಾಲಕಾಲಕ್ಕೆ ಸಭೆಗಳನ್ನು ನಡೆಸುತ್ತದೆ.

ಸಹಿ/–(ಬಿ.ಕೆ.ಸಿನ್ಹಾ)

ಡಿ.ಸಿ.(ಕೈಮಗ್ಗಗಳು)